**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾಯವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. 1075/2024**

ಫಿರ್ಯಾದುದಾರರುಃ ಮೈಸೂರು ಜಿಲ್ಲೆ ಮಹಿಳಾ ಪೊಲೀಸ್ ಠಾಣೆ,
ಮೈಸೂರು.

ವಿರುದ್ಧ

ಆರೋಪಿಗಳುಃ

1. ನಟರಾಜು ಬಿನ್ ಲೇಟ್ ಚಿಕ್ಕಣ್ಣಯ್ಯ,
ವಯಸ್ಸು 39 ವರ್ಷ,
ವಾಸಃ ಊಯಿಗೌಡನಹಳ್ಳಿ, ಹೊಸೂರು ಗ್ರಾಮ,
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

2. ಚಿಕ್ಕಹುಚ್ಚಮ್ಮ ಕೋಂ ಚಿಕ್ಕಣ್ಣಯ್ಯ,
ವಯಸ್ಸು 81 ವರ್ಷ,
ವಾಸಃ ಊಯಿಗೌಡನಹಳ್ಳಿ, ಹೊಸೂರು ಗ್ರಾಮ,
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

3. ಮಹೇಶ ಬಿನ್ ಕರಿಯಯ್ಯ,
ವಯಸ್ಸು 43 ವರ್ಷ,
ವಾಸಃ ಊಯಿಗೌಡನಹಳ್ಳಿ, ಹೊಸೂರು ಗ್ರಾಮ,
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

4. ಸವಿತಾ @ಕವಿತಾ ಬಿನ್ ಲೇಟ್ ರಾಮಯ್ಯ,
ವಯಸ್ಸು 30 ವರ್ಷ,
ವಾಸಃ ಕುಪ್ಪೆ ಗ್ರಾಮ, ಚುಂಚನಕಟ್ಟೆ ಹೋಬಳಿ,
ಸಾಲಿಗ್ರಾಮ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

**ಶ್ರೀಮತಿ ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಅರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ**

ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಮಾರನಹಳ್ಳಿ ಗ್ರಾಮದ ನಿವಾಸಿ ಸಾಕ್ಷಿ-1ರವರನ್ನು ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಊಯಿಗೌಡನಹಳ್ಳಿ, ಹೊಸೂರು ಗ್ರಾಮದ ನಿವಾಸಿ 1ನೇ ಆರೋಪಿಯಾದ ನಿಮ್ಮ ಜೊತೆ ದಿಃ 22.05.2014 ರಂದು ಕೆಂಡಗಣ್ಣಗದ್ದಿಗೆ ದೇವಸ್ಥಾನದ ಸೋಮೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದಿದ್ದು, ಮದುವೆಯಾದ ನಂತರ 1, 2 ಮತ್ತು 4ನೇ ಆರೋಪಿಗಳಾದ ನೀವು ಸಾಕ್ಷಿ-1ರವರನ್ನು ಒಂದು ವರ್ಷ ಚೆನ್ನಾಗಿ ನೋಡಿಕೊಂಡಿದ್ದು ನಂತರದ ದಿನಗಳಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1ರವರ ಮೇಲೆ ವಿನಾಕಾರಣ ಜಗಳ ತೆಗೆದು ಗಲಾಟೆ ಮಾಡಿ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ದಿಃ 04.03.2024 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಹೊಸೂರು ಗ್ರಾಮದ 1ನೇ ಆರೋಪಿಯಾದ ನಿಮ್ಮ ಮನೆಗೆ ಹೋಗಿ 7ನೇ ಆರೋಪಿಯನ್ನು ಪ್ರಶ್ನೆ ಮಾಡುತ್ತಿದ್ದಾಗ ಮನೆಯಲ್ಲಿದ್ದ 1 ರಿಂದ 3ನೇ ಆರೋಪಿಗಳಾದ ಸಮಾನ ಉದ್ದೇಶದಿಂದ ಸಾಕ್ಷಿ- 1ರವರ ಜೊತೆ ಜಗಳ ತೆಗೆದು ಮನೆ ಬಿಟ್ಟು ಹೋಗು ಬೇವರ್ಸಿ ಮುಂಡೆ, ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1ರವರಿಗೆ ಮನೆ ಬಿಟ್ಟು ಹೋಗು ಇಲ್ಲದಿದ್ದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34ರಡಿ

ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 4 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ–1ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ಮತ್ತು 2ನೇ ಆರೋಪಿಗಳಾದ ನೀವು ಸಾಕ್ಷಿ–2 ರಿಂದ 4 ರವರ ಬಳಿಯಿಂದ ಮದುವೆಯ ದಿನ 10 ಗ್ರಾಂ ಚಿನ್ನದ ಚೈನ್ ಮತ್ತು ರೂ.50,000/– ನಗದು ಹಣವನ್ನು ವರದಕ್ಷಿಣೆಯಾಗಿ ಪಡೆದಿರುತ್ತೀರಿ, ಇದು ಕಲಂ 3, 4 ಮತ್ತು 6 ಡಿ ಪಿ ಆಕ್ಟ್ ರೀತ್ಯಾ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಗಳವಿ ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.